**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.154/2023**

| | | |
|---|---|---|
| ಸಾಕ್ಷಿದಾರರ ಹೆಸರು | : | ಶಶಿಕುಮಾರ |
| ತಂದೆಯ ಹೆಸರು | : | ಚಂದ್ರಪ್ಪ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಚಾಲಕ |
| ವಾಸ ಸ್ಥಳ | : | ಗಡೆಕಟ್ಟೆ, ನ್ಯಾಮತಿ ತಾಲ್ಲೂಕು |

ಪಿ.ಡಬ್ಲ್ಯೂ 2

ಸಿ.ಡಬ್ಲ್ಯೂ 2

ದಿ: 09-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಸತೀಶ್ ಕೆ.ಎಸ್.)**:

1. ಚಾಸಾ-1 ನನ್ನ ಅತ್ತಿಗೆ. ಚಾಸಾ-3 ನನ್ನ ಹೆಂಡತಿ. ಚಾಸಾ-4 ನನ್ನ ದೊಡ್ಡಪ್ಪ. ಚಾಸಾ-5 ನನ್ನ ತಂದೆ. ಆರೋಪಿಯು ನನ್ನ ತಂದೆಯ ಎರಡನೇ ಹೆಂಡತಿ. ಚಾಸಾ-1 ರವರು ಗಡಕಟ್ಟೆಯ ಹೊಲದಲ್ಲಿ ವಾಸವಾಗಿದ್ದಾರೆ. ಆರೋಪಿತಳು ಸಹ ಅಲ್ಲೇ ಪಕ್ಕದಲ್ಲಿ ವಾಸವಿದ್ದಾರೆ. ಆರೋಪಿತಳು ಚಾಸಾ-1 ರವರಿಗೆ "ನನ್ನ ಗಂಡನನ್ನು ಇಟ್ಟುಕೊಂಡಿದ್ದೀಯಾ" ಅಂತ ಅನುಮಾನಪಟ್ಟಿರುತ್ತಾರೆ. ನಾನು ಮತ್ತು ಸಂಬಂಧಿಕರು ಸೇರಿ 03-04 ಸಾರಿ ಬುದ್ದಿವಾದ ಹೇಳಿದ್ದೇವೆ. ಈ ರೀತಿ ಅನುಮಾನ ಪಡಬೇಡ ಮತ್ತು ಅವರ ತಂದೆ ಮಗಳ ತರ ಇದ್ದಾರೆ ಅಂತ ಬುದ್ದಿ ಹೇಳಿದರು.

2. ದಿಃ 06-03-2023 ರಂದು ನಾನು, ಚಾಸಾ-3 ಮತ್ತು 4 ರವರು ಅದೇ ಜಮೀನಿನಲ್ಲಿ ಕೆಲಸ ಮಾಡುತ್ತಿರುವಾಗ ನಮಗೆ ಕಿರುಚಿದ ಶಬ್ದ ಕೇಳಿತು. ಆಗ ನಾನು ಮತ್ತುಚಾಸಾ-3 ರವರು ಮನೆಯ ಬಳಿ ಹೋಗಿ ನೋಡಿದಾಗ ಆರೋಪಿಯು ಕೂಡಗೋಲನ್ನು ತೆಗೆದುಕೊಂಡು ಚಾಸಾ-1 ರವರ ಮನೆಗೆ ಹೋಗಿದ್ದರು ಮತ್ತು ಅವರ ಕೈಗಳಿಗೆ ಹೊಡೆದರು ಮತ್ತು ಕೆಟ್ಟ ಶಬ್ದಗಳಿಂದ ಬೈದರು. ನಂತರ ಚಾಸಾ-1 ರವರನ್ನು ಚೀಲೂರು ಆಸ್ಪತ್ರೆಗೆ ಕರೆದುಕೊಂಡುಹೋಗಿ ಅಲ್ಲಿಂದ ಚಾಸಾ-1 ರವರನ್ನು ಶಿವಮೊಗ್ಗದ ಮೆಗ್ಗಾನ ಆಸ್ಪತ್ರೆಗೆ ಕರೆದುಕೊಂಡು ಹೋದೆವು.

3. ದಿಃ 09-03-2023 ರಂದು ಪೊಲೀಸರು ಬಂದು ಮಹಜರ ಮಾಡಿದರು. ಸದರಿ ಮಹಜರಗೆ ನಾನೇ ಸ್ಥಳವನ್ನು ತೋರಿಸಿ ಮಾಹಿತಿ ಕೊಟ್ಟಿರುತ್ತೇನೆ. ಮಹಜರನ್ನು ನಿಪಿ-3 ಅಂತ, ಸಾಕ್ಷಿ ಸಹಿಯನ್ನು ನಿಪಿ-3(ಎ) ಅಂತ ಗುರುತಿಸಲಾಯಿತು. ಆ ಸ್ಥಳದಿಂದ ಮಣ್ಣಿಗೆ ಹತ್ತಿರ ರಕ್ತ ಮತ್ತು ಸಾಧಾ ಮಣ್ಣನ್ನು ತೆಗೆದುಕೊಂಡರು. ಎರಡು ಸೀಲ್ಡ್ ಕವರ್ ನ್ನು ತೆರೆದ ನ್ಯಾಯಾಲಯದಲ್ಲಿ ಓಪನ್ ಮಾಡಲಾಯಿತು. ಅದರಲ್ಲಿ ರಕ್ತ ಹತ್ತಿದ ಮಣ್ಣನ್ನು ಮು.ಮಾ.2 ಅಂತ ಗುರುತಿಸಲಾಯಿತು. ಸಾಧಾ ಮಣ್ಣು ಮು.ಮಾ.3 ಅಂತ ಗುರುತಿಸಲಾಯಿತು. ಸಾಕ್ಷಿದಾರರು ಮು.ಮಾ.2 ಮತ್ತು 3 ನ್ನು ನೋಡಿ ಗುರುತಿಸಿರುತ್ತಾರೆ. ಆ ಸಮಯದಲ್ಲಿ ಪೊಲೀಸರು ಪೋಟೋಗಳನ್ನು ತೆಗೆದರು. ಆ ಪೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ನಿಪಿ-4 ರಿಂದ 7 ಅಂತ ಗುರುತಿಸಲಾಯಿತು. ಹಲ್ಲೆ ಬಳಸಿದ ಕೂಡಗೋಲನ್ನು ನೋಡಿ ಗುರುತಿಸುತ್ತೇನೆ. ಅದನ್ನು ಈಗಾಗಲೇ ಮು.ಮಾ.1 ಅಂತ ಗುರುತಿಸಲಾಗಿದೆ. ಆರೋಪಿಯು ಮು.ಮಾ.1 ರಿಂದ ಚಾಸಾ-1 ರವರ ಮೇಲೆ ಹಲ್ಲೆ ಮಾಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರವಾಗಿ**:

ಆರೋಪಿ ಪರ ವಕೀಲರು ಸಮಯ ಕೋರಿರುವುದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.